**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಜಗದೇವ ಗುತ್ತೇದಾರ (ವಿಧಾನಸಭಾ ಕ್ಷೇತ್ರ) ಇವರು ನಿಯಮ-72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:**

ದಿನಾಂಕ:30-03-2026ರ ಜಾತಿ ಪಟ್ಟಿಯಲ್ಲಿ ಪ್ರವರ್ಗ 2ಎ ರಲ್ಲಿ ಕ್ರಮ ಸಂಖ್ಯೆ: 4(ಎ) ಯಿಂದ (2)ರ ವರೆಗೆ ಈಡಿಗ ಬಿಲ್ಲವ ಸೇರಿದಂತೆ ಎಲ್ಲಾ 26 ಸಮುದಾಯಗಳಿಗೆ ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದಡಿ ಅಳವಡಿಸಲಾದ ವಿವಿಧ ಯೋಜನೆಗಳು ದೊರಕಬೇಕಾದರೂ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡಲಾಗುತ್ತಿರುವುದರಿಂದ, ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮವನ್ನು ಕಂಪನಿಗಳ ಕಾಯ್ದೆ 2013ರಡಿ ಈ ವರ್ಷ ನೋಂದಣಿ ಮಾಡಿರುವುದರಿಂದ 2025-26ನೇ ಸಾಲಿನಲ್ಲಿ ಪ್ರತ್ಯೇಕ ಅನುದಾನ ಬಿಡುಗಡೆಯಾಗದಿರುವುದರಿಂದ ಮತ್ತು 2026-27ನೇ ಸಾಲಿಗೆ ಹೊಸದಾಗಿ ನಿಗಮದ ಕಾರ್ಯಕ್ರಮಗಳನ್ನು ರೂಪಿಸದೇ ಇರುವುದರಿಂದ ಸಮುದಾಯದವರಿಗೆ ಅನ್ಯಾಯವಾಗುತ್ತಿರುವ ವಿಷಯವು ಅತ್ಯಂತ ಮಹತ್ವದ್ದಾಗಿರುವುದರಿಂದ ಹಿಂದುಳಿದ ವರ್ಗಗಳ ಇಲಾಖಾ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30-03-2002ರ ಹಿಂದುಳಿದ ವರ್ಗಗಳ ಜಾತಿ ಪಟ್ಟಿಯ ಪ್ರವರ್ಗ-2(ಎ)ರಲ್ಲಿ ಕ್ರಮ ಸಂಖ್ಯೆ:4(a) ಯಿಂದ (z) ವರೆಗೆ ಈಡಿಗ-ಬಿಲ್ಲವ ಸೇರಿದಂತೆ ನಮೂದಾಗಿರುವ ಒಟ್ಟು 26 ಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮವನ್ನು ಕಂಪನಿಗಳ ಕಾಯ್ದೆ, 2013ರಡಿ ದಿನಾಂಕ:16-01-2026 ರಂದು ನೋಂದಾಯಿಸಲಾಗಿರುತ್ತದೆ.

ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮವು ದಿನಾಂಕ:16-01-2026ರಂದು ನೋಂದಣಿ ಆಗಿರುವುದರಿಂದ 2025-26ನೇ ಸಾಲಿಗೆ ನಿಗಮಕ್ಕೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಈ ಹಿಂದೆ ನಿಗಮ ಸ್ಥಾಪನೆಗೆ ಬಿಡುಗಡೆ ಆಗಿದ್ದ ರೂ.10.00 ಕೋಟಿಗಳನ್ನು ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ನೀಡುವಂತೆ ದಿನಾಂಕ: 24-03-2026ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರಿಗೆ ಸೂಚಿಸಲಾಗಿದೆ.

ಮುಂದುವರೆದು, ಈಡಿಗ ಹಾಗೂ 26 ಉಪ ಜಾತಿಗಳು ಸೇರಿದಂತೆ ಫಲಾನುಭವಿಗಳಿಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳ ಸೌಲಭ್ಯವನ್ನು ನೀಡಲಾಗಿರುತ್ತದೆ. ಇದರಿಂದ ಸದರಿ ಸಮುದಾಯದವರಿಗೆ ಯಾವುದೇ ಅನ್ಯಾಯ ಆಗಿರುವುದಿಲ್ಲ.

...2..

ಪ್ರಸ್ತುತ, ನಿಗಮವು ಪ್ರತ್ಯೇಕವಾಗಿ ಸ್ಥಾಪನೆಗೊಂಡಿರುವುದರಿಂದ 2026-27ನೇ ಸಾಲಿಗೆ ಹೊಸದಾಗಿ ನಿಗಮದ ಕಾರ್ಯಕ್ರಮಗಳನ್ನು ರೂಪಿಸಿ ಮಾರ್ಗಸೂಚಿಗಳನ್ನು ಹೊರಡಿಸಿ ನಿಗಮಕ್ಕೆ ಪ್ರತ್ಯೇಕ ಲೆಕ್ಕಶೀರ್ಷಿಕೆಯೊಂದಿಗೆ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗುವುದು.

ಸಂಖ್ಯೆ: ಹಿಂವಕ 349 ಬಿಎಂಎಸ್ 2026

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.